"ಮಧುರ ಮಕ್ಕಳೇ,-ವಿಚಾರ ಸಾಗರ ಮಂಥನ ಮಾಡಿ ಶ್ರೀ ಕೃಷ್ಣ ಮತ್ತು ಪರಮಾತ್ಮ ಶಿವನ ನಡುವೆ ಇರುವ ಮಹಾನ್ ಅಂತರವನ್ನು ಸ್ಪಷ್ಟ ಮಾಡಿ" (ಶ್ರೀಕೃಷ್ಣ ಜನ್ಮಾಷ್ಟಮಿಗೆ ಸಂಬಂಧಿಸಿರುವುದು)

ಪ್ರಶ್ನೆ: ಬ್ರಹ್ಮಾಬಾಬಾ ತಮ್ಮೊಳಗೆ ತಾವು ಏನು ಮಾತನ್ನಾಡಿಕೊಳ್ಳುತ್ತಾರೆ? ಅವರಿಗೆ ಯಾವುದು ಆಶ್ಚರ್ಯವೆನ್ನಿಸುತ್ತದೆ?

ಉತ್ತರ: ಬ್ರಹ್ಮಾ ಬಾಬಾ ತಮ್ಮೊಳಗೆ ತಾವು ಮಾತನಾಡಿಕೊಳ್ಳುತ್ತಾರೆ-ಏನಾಗುವುದೊ ಗೊತ್ತಿಲ್ಲಾ ಘಳಿಗೆ - ಘಳಿಗೆ ಶಿವಬಾಬಾರವರನ್ನು ಮರೆತು ಹೋಗುತ್ತೇನೆ. ಹೀಗಲ್ಲ, ತಂದೆ ಯಾವಾಗ ಪ್ರವೇಶ ಮಾಡುತ್ತಾರೆ ಆಗ ನೆನಪಿರುತ್ತಾರೆ, ಯಾವಾಗ ಬಾಬಾ ಹೊರಟುಹೋಗುತ್ತಾರೆ ಆಗ ಮರೆತುಹೋಗುತ್ತಾರೆ. ಆದರೆ ನಾನಂತೂ ಅವರ ಮಗುವಾಗಿದ್ದೇನೆ, ಆದರೂ ನೆನಪು ಏಕೆ ಮರೆತು ಹೋಗುತ್ತೆ? ಏನು ನನ್ನ ನೆನಪಿನಿಂದಲೇ ಬಾಬಾ ಬರುವರಾ? ಹೀಗೆ ಹೀಗೆ ಬಾಬಾ ತಮ್ಮೊಳಗೆ ತಾವೆ ಮಾತನಾಡುತ್ತಾ ಆಶ್ಚರ್ಯ ಪಡುತ್ತಾರೆ

ಗೀತೆ: ನೀವು ಪ್ರೀತಿಯ ಸಾಗರ ಆಗಿರುವಿರಿ........

ಓಂ ಶಾಂತಿ. ಶಿವಬಾಬಾ ಕುಳಿತು ತನ್ನ ಅಗಲಿಹೋಗಿ ಮರಳಿ ಸಿಕ್ಕಿರುವ ಮಕ್ಕಳಿಗೆ ತಿಳಿಸುತ್ತಾರೆ ಗೀತೆಯ ಭಗವಂತ ಯಾರು? ಏಕೆಂದರೆ ಈ ಸಮಯದಲ್ಲಿ ಭಾರತದಲ್ಲಿ ಅಜ್ಞಾನ ಅಂಧಕಾರವಿದೆ. ಇದಕ್ಕೆ ಹೇಳಲಾಗುವುದು ಘೋರ ಅಂಧಕಾರ, ಅಜ್ಞಾನ ಅಂಧಕಾರ. ನಂತರ ಜ್ಞಾನದ ಬೆಳಕು ಬೇಕು. ಪರಮಪಿತ ಪರಮಾತ್ಮನನ್ನೇ ಮನುಷ್ಯರು ಅವರು ಜ್ಞಾನದ ಸಾಗರ ಎಂದು ಒಪ್ಪುತ್ತಾರೆ, ಜ್ಞಾನಪೂರ್ಣರಾಗಿದ್ದಾರೆ. ಒಳ್ಳೆಯದು, ಅವರು ಜ್ಞಾನದ ಸಾಗರ ಆಗಿದ್ದಾರೆ ಅವರಿಂದ ಏನು ಸಿಗುವುದು? ನದಿಗಳಿಂದ ನೀರು ಸಿಗುವುದು ಅದನ್ನು ತುಂಬಿಕೊಂಡು ಸ್ನಾನವನ್ನೂ ಮಾಡುತ್ತಾರೆ. ನಿಮಗೆ ಜ್ಞಾನ ಸಾಗರನಿಂದ ಏನು ಸಿಗುವುದು? ಒಂದು ಹನಿ. ತಂದೆ ಬಂದು ಮಕ್ಕಳಿಗೆ ತಿಳಿಸುತ್ತಾರೆ-ನಾನು ಜ್ಞಾನಸಾಗರನಾಗಿದ್ದೇನೆ, ನಿಮಗೆ ಹನಿಯನ್ನು ಕೊಡುತ್ತೇನೆ. ಯಾವ ಹನಿ? ಕೇವಲ ಹೇಳುತ್ತೇನೆ- ನಾನು ನಿಮ್ಮ ತಂದೆಯಾಗಿದ್ದೇನೆ. ನೀವು ನನ್ನನ್ನು ನೆನಪು ಮಾಡಿ. ಈ ರೀತಿ ತಿಳಿಯಿರಿ ನಾವು ನಮ್ಮ ಶಾಂತಿಧಾಮ-ಸುಖಧಾಮಕ್ಕೆ ಹೋಗುವೆವು.

ಜ್ಞಾನ ಸಾಗರ ಒಂದು ಸೆಕೆಂಡ್ನಲ್ಲಿ ಜೀವನ್ ಮುಕ್ತಿ ವೈಕುಂಠಕ್ಕೆ ಕಳುಹಿಸಿಬಿಡುತ್ತಾರೆ. ಮನೆಯಲ್ಲಿ ಕುಳಿತ್ತಿದ್ದ ಹಾಗೆ ದಿವ್ಯ ದೃಷ್ಟಿಯನ್ನು ಕೊಟ್ಟುಬಿಡುತ್ತಾರೆ. ಮನುಷ್ಯರಂತು ಒಬ್ಬರು ಇನ್ನೊಬ್ಬರಿಗೆ ಎದುರಿಗೆ ದೃಷ್ಟಿ ಕೊಡುತ್ತಾರೆ. ಬಾಬಾ ಮನೆಯಲ್ಲಿ ಕುಳಿತ್ತಿದ್ದಹಾಗೆ ಸಾಕ್ಷಾತ್ಕಾರ ಮಾಡಿಸುತ್ತಾರೆ. ಒಂದುಹನಿ ಸಿಗುವುದರಿಂದ ನೀವು ಇಲ್ಲಿಂದ ಹೊರಟುಹೋಗಿಬಿಡುವಿರಿ. ಇಲ್ಲಿ ಕುಳಿತು-ಕುಳಿತ್ತಿದ್ದಹಾಗೆ ನೀವು ವೈಕುಂಠಕ್ಕೆ ಹೋಗಿಬಿಡುವಿರಿ. ಈಗ ತಂದೆ ಕುಳಿತು ತಿಳಿಸುತ್ತಾರೆ. ಗೀತೆಯ ಭಗವಂತ ಯಾರಾಗಿದ್ದಾರೆ? ಅವರಾಗಿದ್ದಾರೆ ಜ್ಞಾನದಸಾಗರ ನಿರಾಕಾರ. ಮನುಷ್ಯರಂತೂ ಶ್ರೀಕೃಷ್ಣನಿಗಾಗಿ ಹಾಡುತ್ತಾರೆ. ಈಗ ನೀವು ತಿಳಿಸಬೇಕಾಗಿದೆ ಶ್ರೀಕೃಷ್ಣನು ಜ್ಞಾನವನ್ನು ಹೇಳಲಿಲ್ಲ. ಮೊದ-ಮೊದಲು ಹೇಳುತ್ತಾರೆ ಕೃಷ್ಣನು ತಾಯಿಯ ಗರ್ಭದಿಂದ ಜನ್ಮ ತೆಗೆದುಕೊಂಡನು ಎಂದು. ಕಂಸಪುರಿ ಇತ್ತು. ನಂತರ ಆಕಾಶವಾಣಿ ಹೇಳಿತು-ಹೇ ಕಂಸ, ನಿನ್ನನ್ನು ಸಾಯಿಸುವವನು ಬಂದಿದ್ದಾನೆ. ಇದನ್ನಂತು ತಿಳಿದಿರುವಿರಿ ಎಲ್ಲರೂ ಅಸುರರಾಗಿದ್ದಾರೆ. ಕಂಸ, ಜರಾಸಂಧ, ಅಕಾಸುರ, ಬಕಾಸುರ ಎಲ್ಲಾ ಪಾಪಾತ್ಮರುಗಳು ವಿನಾಶ ಮಾಡುವುದಕ್ಕಾಗಿ ಅವರ ಜನ್ಮ ತೋರಿಸುತ್ತಾರೆ. ಆದ್ದರಿಂದ ಶ್ರೀಕೃಷ್ಣನು ಜನ್ಮ ಪಡೆದನು. ಅವನಂತೂ ಚಿಕ್ಕವನಾಗಿದ್ದ. ಅಂದಮೇಲೆ ಜ್ಞಾನ ಯಾವಾಗ ಕೊಟ್ಟರು? ಅವರನ್ನಂತೂ ಯುದ್ಧದ ಮೈದಾನದಲ್ಲಿ ಕೃಷ್ಣನ ವಿಶ್ವರೂಪ ತೋರಿಸುತ್ತಾರೆ, ಚಿಕ್ಕದಾಗಂತೂ ತೋರಿಸುವುದಿಲ್ಲ. ಹಾಗೆ ಕೃಷ್ಣ ಜಯಂತಿಯ ನಂತರ ಗೀತಾ ಜಯಂತಿ ತೋರಿಸುತ್ತಾರೆ. ಸ್ವಲ್ಪ ಸಮಯದ ನಂತರ ಯಾವಾಗ ಅವರನ್ನು ದೊಡ್ಡವರಾದರು ಆಗ ಜ್ಞಾನ ಕೊಟ್ಟಿರಬಹುದು. ಇದನ್ನೂ ತೋರಿಸುತ್ತಾರೆ - ಜನ್ಮ ಪಡೆದರು. ಸಮಯವನ್ನೂ ಸಹಾ ತೋರಿಸುತ್ತಾರೆ - ರಾತ್ರಿಯ ಸಮಯ. ಇಲ್ಲಿ ನೀವು ನೋಡುವಿರಿ ಶಿವಬಾಬಾರವರ ಪದರಾಮಣಿಯಾಗಿದೆ. ಯಾರಿಗೂ ತಿಳಿದಿಲ್ಲ ಯಾವಾಗ ಪ್ರವೇಶ ಆಯಿತು ಎಂದು. ಶಿವಬಾಬಾ ಅಂತೂ ಮಗು ಆಗಿರಲಿಲ್ಲ. ವೃದ್ಧ ವಾನಪ್ರಸ್ಥ ಅವಸ್ಥೆಯಲ್ಲಿ ಬಂದಿದ್ದಾರೆ. ಯಾವಾಗ ಬಂದರು - ಅದರ ತಾರೀಖು ಇಲ್ಲ. ಕೃಷ್ಣನದಂತೂ ತಿಥಿ-ತಾರೀಖು ಇದೆ ಮತ್ತು ಅವರು ಗರ್ಭದಿಂದ ಜನ್ಮ ಪಡೆದರು. ಈ ಶಿವಬಾಬಾರವರಂತೂ ಜ್ಞಾನಸಾಗರ ಆಗಿದ್ದಾರೆ. ಅವರು ಚಿಕ್ಕವರಾಗಬೇಕಿಲ್ಲ, ಮತ್ತೆ ದೊಡ್ಡವರಾಗಿ ಜ್ಞಾನ ತಿಳಿಸುವ ಹಾಗೆ. ಕೃಷ್ಣನಂತೂ ಮನುಷ್ಯರಾಗಿದ್ದರು. ಮನುಷ್ಯನನ್ನು ಜ್ಞಾನಸಾಗರ ಎಂದು ಹೇಳಲಾಗುವುದಿಲ್ಲ. ಅವರ ಜನ್ಮವಂತೂ ಸ್ವರ್ಗದಲ್ಲಾಯಿತು. ಅವರು ಯಾರಿಗೂ ರಾಜಯೋಗ ಕಲಿಸಲು ಸಾಧ್ಯವಿಲ್ಲ, ಏಕೆಂದರೆ ಖುದ್ದು ಅವರೆ ರಾಜಾ ಆಗಿದ್ದಾರೆ. ಸರಿಯಾಗಿ ನೀವು ತಿಳಿದಿರುವಿರಿ ನಿರಾಕಾರ ತಂದೆಯೆ ಬಂದು ರಾಜಯೋಗ ಕಲಿಸುತ್ತಾರೆ. ಪತಿತರನ್ನು ಪಾವನ, ರಾಜರುಗಳ ರಾಜರನ್ನಾಗಿ ಮಾಡುತ್ತಾರೆ.

ಆ ಮಿತವಾದ ರಾತ್ರಿ ಮತ್ತು ದಿನ ಹಾಗೂ ಈ ಬೇಹದ್ದಿನ ರಾತ್ರಿ ಮತ್ತು ದಿನದ ಅರ್ಥದಲ್ಲಿ ವ್ಯತ್ಯಾಸವಿದೆ. ಇದಾಗಿದೆ ಸಂಗಮ

ಯಾವಾಗ ಬ್ರಹ್ಮಾನ ರಾತ್ರಿ ಪೂರ್ಣವಾಗಿ ಬ್ರಹ್ಮಾನ ಹಗಲು ಪ್ರಾರಂಭವಾಗುವುದು. ಇದಾಗಿದೆ ಬೇಹದ್ದಿನ ರಾತ್ರಿ, ಅಜ್ಞಾನ ಅಂಧಕಾರ. ಸತ್ಯಯುಗದಲ್ಲಿ ಇರುವುದು ಬೆಳಕು. ಆ ರಾತ್ರಿಯ ಮಾತಲ್ಲ. ಅವರಂತು ಕೃಷ್ಣನ ಜನ್ಮವನ್ನು ರಾತ್ರಿಯಲ್ಲಿ ಆಚರಿಸುತ್ತಾರೆ. ಅದಾಯಿತು ಮಿತವಾದ ಮಾತು, ಇದಾಗಿದೆ ಬೇಹದ್ದಿನದು. ತಂದೆ ಹೇಳುತ್ತಾರೆ ನಾನು ಬರುತ್ತೇನೆ, ನನಗಾಗಿ ಯಾವುದೇ ತಿಥಿ-ತಾರೀಖು ಇಲ್ಲ. ಕೃಷ್ಣ-ರಾಮ ಇವರಿಗೆಲ್ಲಾ ತಿಥಿ-ತಾರೀಖು ಇದೆ. ಮುಖ್ಯವಾಗಿರುವುದೇ ಎರಡು.

ಈಗ ಕೃಷ್ಣಜಯಂತಿ ಬರುವುದಲ್ಲವೆ. ಅವರಿಗೆ ತಿಳಿಸಬೇಕು ಕೃಷ್ಣನಂತೂ ಚಿಕ್ಕಮಗುವಾಗಿದ್ದಾನೆ. ಬ್ರಹ್ಮಾನ ರಾತ್ರಿ ಮತ್ತು ಹಗಲು ಎಂಬ ಗಾಯನವಿದೆ. ಬ್ರಹ್ಮಾನ ದಿನ ಕೃಷ್ಣ ಮತ್ತು ಬ್ರಹ್ಮಾನ ರಾತ್ರಿ ಬ್ರಹ್ಮಾ ಆಗಿದ್ದಾರೆ. ಬ್ರಹ್ಮಾನೇ ನಂತರ ಕೃಷ್ಣ ಆಗುತ್ತಾರೆ. ಕೃಷ್ಣನರಾತ್ರಿ ಅಥವಾ ಕೃಷ್ಣನ ದಿನ ಎಂದು ಹೇಳಲಾಗುವುದಿಲ್ಲ. ಅವರು ತಿಳಿಯುತ್ತಾರೆ ಕೃಷ್ಣ ಭಗವಂತ ಆಗಿದ್ದಾರೆ ಎಂದು, ಅವರು ಹಾಜಿರ್ ಹಜೂರ್ ಆಗಿದ್ದಾರೆ. ಅವರಿಗೆ ಇದರ ಮೇಲೆ ಸಹಾ ತಿಳಿಸಿ. ನಿಮ್ಮದಾಗಿದೆ ಶಿವಜಯಂತಿ ಅಥವಾ ಶಿವರಾತ್ರಿ ಎಂದಾದರೂ ಹೇಳಿ. ಶಿವಜಯಂತಿ ಎಂದು ಹೇಳುವುದು ಸರಿಯಾಗಿದೆ. ಇದನ್ನೂ ಸಹ ತಿಳಿಸಬೇಕಿದೆ. ಅವರು ಗರ್ಭದಲ್ಲಂತೂ ಬರುವುದಿಲ್ಲ. ಸಾಧಾರಣ ತನುವಿನಲ್ಲಿ ಬರತ್ತಾರೆ. ಕೃಷ್ಣನದಂತೂ 8 ಪೀಳಿಗೆ ನಡೆಯುತ್ತದೆ. ಚಿಕ್ಕಂದಿನಲ್ಲಿ ಅವರನ್ನು ಮೋಹನ ಅಥವಾ ಕೃಷ್ಣ ಎಂದು ಕರೆಯುತ್ತಾರೆ. ಹೇಗೆ ಪ್ರಿನ್ಸ್ ಆಫ್ ವೇಲ್ಸ್ ಇದ್ದಾರೆ ಅದೇರೀತಿ ಮೊಟ್ಟಮೊದಲ ಗದ್ದುಗೆ ಇಂದ್ರಪ್ರಸ್ತದ- ಪ್ರಿನ್ಸ್ ಆಫ್ ಇಂದ್ರಪ್ರಸ್ತ. ನಂತರ ಅವರು ಪ್ರಿನ್ಸ್ನಿಂದ ಕಿಂಗ್ ಆಗುತ್ತಾರೆ. ಕೃಷ್ಣ ಅಕ್ಷರ ಅಲ್ಲಾ ಮಹಾರಾಜಾ ಎನ್ನುವ ಹೆಸರಿನಿಂದಲೇ ಕರೆಯಲಾಗುವುದು. ಶ್ರೀ ಲಕ್ಷ್ಮಿ-ನಾರಾಯಣರಿಗೆ ಮಹಾರಾಜಾ-ಮಹಾರಾಣಿ ಎಂದು ಹೇಳುತ್ತಾರೆ. ಕಿಂಗ್ ಎನ್ನುವ ಅಕ್ಷರ ಆಂಗ್ಲ ಭಾಷೆಯದ್ದಾಗಿದೆ, ಅಸಲಿ ಹೆಸರು ಮಹಾರಾಜಾ-ಮಹಾರಾಣಿ ಆಗಿದೆ. ಹೀಗಲ್ಲಾ ನಾರಾಯಣ ಜ್ಞಾನ ಕೊಟ್ಟಿದ್ದರು. ಸ್ವಯಂವರದ ನಂತರ ಕೃಷ್ಣ ಶ್ರೀ ನಾರಾಯಣ ಆಗುತ್ತಾರೆ. ಈಗ ಈ ಜ್ಞಾನಸಾಗರ ಶಿವನ ಹೆಸರಂತೂ ಬದಲಾಗುವುದೇ ಇಲ್ಲ. ಒಂದೆ ಹೆಸರಿರುತ್ತದೆ. ಅವರ ರಥವಂತು ದೊಡ್ಡದಾಗಿದೆ ಬಂದ ತಕ್ಷಣ ಜ್ಞಾನ ತಿಳಿಸುವುದನ್ನು ಪ್ರಾರಂಭ ಮಾಡಿದರು. ಇವರಂತು(ಬ್ರಹ್ಮಾ) ಏನನ್ನೂ ತಿಳಿದಿರಲಿಲ್ಲ. ತಿಳಿಯಲಾಗುವುದು ಇವರಲ್ಲಿ ಬಂದಿದ್ದಾರೆ ಎಂದು, ಯಾರು ಸಾಕ್ಷಾತ್ಕಾರವನ್ನು ಮಾಡಿಸುತ್ತಾರೆ. ಜ್ಞಾನವನ್ನು ಕೊಡುತ್ತಿದ್ದಾರೆ. ಈ ಸಾಕ್ಷಾತ್ಕಾರದ ರಹಸ್ಯ ಅಥವಾ ಈ ಜ್ಞಾನ ಪ್ರಾರಂಭದಲ್ಲಿ ಮೊದಲು ತಿಳಿಯುತ್ತಿರಲಿಲ್ಲ. ಬಾಬಾ ತಮ್ಮ ಅನುಭವವನ್ನು ಹೇಳುತ್ತಾರೆ-ಪ್ರಾರಂಭದಲ್ಲಿ ನಾನು ಬನಾರಸ್ಗೆ ಹೋದೆನು ಆಗ ಗೋಡೆಗಳ ಮೇಲೆ ಗೋಲಾಕಾರದ ಹಾಗೂ ಇತರೆ ಚಿತ್ರಗಳನ್ನು ಬರೆಯುತ್ತಿದ್ದೆ. ಬುದ್ಧಿಗೆ ಏನೂ ತಿಳಿಯುತ್ತಿರಲಿಲ್ಲ-ಇದು ಏನು? ಏಕೆಂದರೆ ಇವರಂತು ಸಣ್ಣ ಮಗುವಂತಾಗಿಬಿಟ್ಟರು. ಹೊಸ ಜನ್ಮ ಪಡೆದರಲ್ಲವೆ. ಹೇಳುತ್ತಾರಲ್ಲವೆ-ಬಾಬಾ, ನಾನು 8-10 ತಿಂಗಳ ನಿಮ್ಮ ಮಗುವಾಗಿದ್ದೇನೆ ಆದ್ದರಿಂದ ನಾನೂ ಸಹಾ ಮಗುವಾಗಿದ್ದೇನೆ. ಆದ್ದರಿಂದ ಮೊದಲು ಏನೂ ತಿಳಿಯುತ್ತಿರಲಿಲ್ಲ. ಅಂದಿನ ಜ್ಞಾನದ ಮಾತುಗಳು ಬೇರೆಯೇ ಇತ್ತು. ಎಲ್ಲಾ ಗೋಜಲು ಏನೇನು ಕುಳಿತು ತೆಗೆಯುತ್ತಿದ್ದರು. ಈಗಂತು ಕಲಿಯುತ್ತಾ-ಕಲಿಯುತ್ತಾ ಎಷ್ಟು ವರ್ಷಗಳಾಯಿತು! ಈಗ ತಂದೆಯ ಮಾತುಗಳು ತಿಳಿಯುತ್ತಾ ಬರುತ್ತಿವೆ. ಮಕ್ಕಳು ಕೃಷ್ಣ ಜಯಂತಿಯ ಬಗ್ಗೆ ತಿಳಿಸಿಕೊಡಬೇಕಾಗಿದೆ. ಚಿತ್ರವಂತು ಸರಿಯಾಗಿದೆ. ವೃಕ್ಷದಲ್ಲಿ ಬ್ರಹ್ಮಾನ ಚಿತ್ರವೂ ಇದೆ. ಬೆಣ್ಣೆಯನ್ನು ಇವರು ತೆಗೆದುಕೊಂಡುಬಿಡುತ್ತಾರೆ. ವಿಶ್ವದ ಮಾಲೀಕತನದ ಬೆಣ್ಣೆಯಾಗಿದೆ. ಕೃಷ್ಣ ಸತ್ಯಯುಗದ ಪ್ರಾಲಬ್ಧ ತೆಗೆದುಕೊಂಡು ಬಂದಿದ್ದಾರೆ. ಶ್ರೀಕೃಷ್ಣ ಆಗಿದ್ದಾರೆ ಸತ್ಯಯುಗದ ಮೊದಲ ರಾಜಕುಮಾರ ನಂತರ ಅನೇಕ ಮಕ್ಕಳು ರಾಜಕುಮಾರರಾಗುತ್ತಾರೆ. ಇದಾಗಿದೆ ಅವರ ಪ್ರಾಲಬ್ಧ ಯಾವುದು ಕಲಿಯುಗದಲ್ಲಂತು ಇರಲೇ ಇಲ್ಲ. ಇವರಿಗೆ ಸತ್ಯಯುಗದ ಪ್ರಾಲಬ್ಧ ಯಾರು ಮಾಡಿದರು? ಗಾಯನ ಮಾಡಲಾಗುತ್ತೆ- ಜ್ಞಾನ ಸೂರ್ಯ ಪ್ರಕಟವಾದೊಡನೆ, ಅಜ್ಞಾನ ಅಂಧಕಾರ ವಿನಾಶ. ಜ್ಞಾನಸಾಗರ ಅಂತು ಶಿವಬಾಬಾ ಆಗಿದ್ದಾರೆ. ಅವರು ಬಂದಿದ್ದಾರೆ ಮತ್ತು ಸ್ವರ್ಗದ ಸ್ಥಾಪನೆ ಮಾಡುತ್ತಿದ್ದಾರೆ. ವ್ಯತ್ಯಾಸ ತಿಳಿಸಬೇಕು. ಕೃಷ್ಣ ಹೇಗೆ ಗೀತೆಯನ್ನು ತಿಳಿಸಲು ಸಾಧ್ಯ, ಅವನಂತು ಮಗುವಾಗಿದ್ದಾನೆ. ಗರ್ಭದಿಂದ ಬಂದಿದ್ದಾನೆ. ತೋರಿಸುತ್ತಾರೆ-ಅವರು ಕಂಸ, ಜರಾಸಂಧ ಇತ್ಯಾದಿ ಇದ್ದರು. ಆದರೆ ಅಲ್ಲಿ ಅಸುರರಂತೂ ಇರಲು ಸಾಧ್ಯವಿಲ್ಲ. ಅಸುರರು ಮತ್ತು ದೇವತೆಗಳ ಯುದ್ಧ ತೋರಿಸುತ್ತಾರೆ. ಆದ್ದರಿಂದ ಖಂಡಿತವಾಗಿ ಅಸುರರು ಕಲಿಯುಗದ ಅಂತ್ಯದಲ್ಲಿ ಇರುತ್ತಾರೆ, ದೇವತೆಗಳು ಸತ್ಯಯುಗದ ಆದಿಯಲ್ಲಿ ಇರುತ್ತಾರೆ. ಇಬ್ಬರ ಯುದ್ಧವಂತೂ ನಡೆದಿರಲಿಲ್ಲ. ಮಹಾಭಾರತ ಯುದ್ಧ ಸರಿಯಾಗಿದೆ. ದೇವತೆಗಳಂತು ಇಲ್ಲಿ ಇರಲು ಸಾಧ್ಯವಿಲ್ಲ. ಅಸುರರಿಗೆ ಅಸುರರ ಜೊತೆ ಯುದ್ಧ ಆಯಿತು. ಮುಸಲ್ಮಾನರ ರಾಜ್ಯವನ್ನೂ ನೋಡುವಿರಿ. ಯಾಧವರು, ಕೌರವರು, ಪಾಂಡವರೂ ಸಹಾ ಸರಿಯಾಗಿದ್ದಾರೆ.

ಪಾಂಡವರಾಗಿದ್ದಾರೆ ಅಹಿಂಸಕರು, ಯೋಗಬಲವುಳ್ಳವರು. ಇಲ್ಲಂತೂ ರಕ್ತದ ನದಿಗಳು ಹರಿಯುತ್ತಿರುವುದು. ವೈರತ್ವ ಇರುವುದಲ್ಲವೆ. ವಿಭಜನೆಯ ಸಮಯದಲ್ಲಿ ಬಹಳಷ್ಟು ರಕ್ತದ ನದಿಹರಿಯಿತಲ್ಲವೆ. ಸಹೋದರ-ಸಹೋದರರ ನಡುವೆ ಯುದ್ಧ ನಡೆಯಿತು, ಸಹೋದರ-ಸಹೋದರರಾದರಲ್ಲವೆ. ಯುದ್ಧ ಅವರನಡುವೆ ನಡೆಯುವುದು, ಇಲ್ಲದೇ ಹೋದರೆ ರಕ್ತದ ನದಿ ಹೇಗೆ ಹರಿಯುವುದು? ಇಲ್ಲಂತೂ ಒಬ್ಬರು ಇನ್ನೊಬ್ಬರ ಕೊಲೆ ಮಾಡುತ್ತಾರೆ. ಕತ್ತಿಗಳು ಝಳಪಿಸುತ್ತದೆ ಆಗ ರಕ್ತದ ನದಿ ಹರಿಯುತ್ತದೆ. ಮತ್ತು ಇದಾಗಿದೆ ಸಂಗಮದ ಸಮಯ. ರಕ್ತದ ನದಿಗಳ ನಂತರ ತುಪ್ಪದ ನದಿಗಳು ಹರಿಯುತ್ತವೆ. ಕೃಷ್ಣನು ಚಿಕ್ಕ ರಾಜಕುಮಾರನಾಗಿದ್ದಾನೆ. ಆಮೇಲೆ ಕುಳಿತು ಅವನ ನಿಂದನೆಯನ್ನೂ ಮಾಡಿದ್ದಾರೆ. ಅವರನ್ನಂತೂ ಜ್ಞಾನಸಾಗರನೆಂದು ಹೇಳಲಾಗುವುದಿಲ್ಲ. ದೇವತೆಗಳ ಮಹಿಮೆಯ ಗಾಯನವನ್ನು ಮಾಡಲಾಗುವುದು-ಸರ್ವಗುಣ ಸಂಪನ್ನ, ಮರ್ಯಾದಾ ಪುರುಷೋತ್ತಮ........ ಈ ಮಹಿಮೆಗಳು ಮಕ್ಕಳದಾಗಲು ಸಾಧ್ಯವಿಲ್ಲ. ಮಹಿಮೆ ಯಾವಾಗಲೂ ರಾಜಾ-ರಾಣಿಯರದು

ನಡೆಯುವುದು. ಆದರೆ ಅವರು ಲಕ್ಷ್ಮಿ-ನಾರಾಯಣರನ್ನು ಸತ್ಯಯುಗದಲ್ಲಿ ಮತ್ತು ಕೃಷ್ಣನನ್ನು ದ್ವಾಪರದಲ್ಲಿ ತೆಗೆದುಕೊಂಡು ಹೋಗಿದ್ದಾರೆ. ಎಷ್ಟು ದೊಡ್ಡ ತಪ್ಪು ಮಾಡಿದ್ದಾರೆ! ಲಕ್ಷ್ಮಿ-ನಾರಾಯಣರ ಬಾಲ್ಯದ ಕತೆಯನ್ನು ಸಹಾ ಯಾರೂ ಹೇಳಲು ಸಾಧ್ಯವಿಲ್ಲ. ರಾಮ-ಸೀತೆಯರಿಗೂ ಸಹ ಏನಾದರೂ ಒಂದನ್ನು ಹೇಳುತ್ತಾರೆ. ಕೃಷ್ಣನಿಗೂ ಸಹಾ ಉಲ್ಟಾ-ಸುಲ್ಟಾ ಮಾತುಗಳನ್ನು ತಿಳಿಸುತ್ತಾರೆ. ಏನಾದರೂ ಸರಿಯಾದ ಕಥೆಯನ್ನಾದರೂ ತಿಳಿಸಿ.

ಲಕ್ಷ್ಮಿ-ನಾರಾಯಣರದಂತೂ ಮಹಿಮೆಯನ್ನು ಗಾಯನ ಮಾಡುತ್ತಾರೆ-ಸರ್ವಗುಣ ಸಂಪನ್ನ, ಮರ್ಯಾದಾ ಪುರುಷೋತ್ತಮ, ಅಹಿಂಸಾ ಪರಮೋಧರ್ಮಿ....... ಒಳ್ಳೆಯದು, ಅವರಿಗೆ ರಾಜ್ಯವನ್ನು ಯಾರು ಕೊಟ್ಟರು? ಮನುಷ್ಯರ ಹೆಸರು ಕೇಳಿ ತಬ್ಬಿಬ್ಬಾ ಆಗುತ್ತಾರೆ. ಲಕ್ಷ್ಮಿ-ನಾರಾಯಣ ಎಂದು ಹೇಳುವುದರಿಂದ ನೀವು ಸತ್ಯಯುಗಕ್ಕೆ ಹೋಗಿಬಿಡುವಿರಿ. ಇದಾಗಿದೆ ನರನಿಂದ ನಾರಾಯಣರಾಗುವ ಕಥೆ. ಕೃಷ್ಣ ಆಗುವ ಕಥೆ ಎಂದು ಹೇಳಲಾಗುವುದಿಲ್ಲ, ಇದಕ್ಕೆ ಸತ್ಯನಾರಾಯಣ ಕಥೆ ಎಂದು ಹೇಳಲಾಗುವುದು. ಸತ್ಯ ಕೃಷ್ಣನ ಕಥೆ ಎಂದು ಹೇಳಲಾಗುವುದಿಲ್ಲ. ಸತ್ಯ ಬಾಬಾ ಜ್ಞಾನಸಾಗರ ಈ ಕಥೆಯನ್ನು ತಿಳಿಸುತ್ತಾರೆ. ಇಡೀ ಸೃಷ್ಟಿಯ ಆದಿ-ಮಧ್ಯ-ಅಂತ್ಯದ ಕಥೆಯಾಗಿದೆ. ಅದರಲ್ಲಿ ಶ್ರೀಲಕ್ಷ್ಮಿ-ನಾರಾಯಣರ ಕಥೆಯೂ ಸಹಾ ಬಂದು ಬಿಡುವುದು. ಅವರ 84 ಜನ್ಮದ ಕಥೆಯನ್ನು ತೋರಿಸುತ್ತಾರೆ. ಶ್ರೀನಾರಾಯಣನ ಕಥೆಯಿಂದ ದೋಣಿ ಪಾರಾಗಿಬಿಡುವುದು. ಸರಿಯಾಗಿ ತಂದೆ ಕುಳಿತು ಮಕ್ಕಳಿಗೆ ನರನಿಂದ ನಾರಾಯಣರಾಗುವ ಸತ್ಯವಾದ ಕಥೆ ಹೇಳುತ್ತಾರೆ. ಶ್ರೀ ನಾರಾಯಣ ಅಂತು ದೊಡ್ಡವರಾಗಿದ್ದಾರಲ್ಲವೆ. ಸ್ವಯಂವರದ ಮೊದಲು ಯಾರಾಗಿದ್ದರು? ಏನು ಲಕ್ಷ್ಮಿ ನಾರಾಯu ಎಂಬ ಹೆಸರೇ ಇತ್ತಾ ಅಥವಾ ಬೇರೆ ಏನಾದರೂ ಹೆಸರು ಇತ್ತೆ ? ಹೌದು ರಾಧೆ-ಕೃಷ್ಣ, ಅವರ ಸ್ವಯಂ ವರದ ನಂತರ ಲಕ್ಷ್ಮಿ-ನಾರಾಯಣ ಎಂದು ಹೆಸರಿಟ್ಟರು. ಬಾಬಾ ಈ ರೀತಿ (ಪ್ರಬಂಧ) ಕೊಡುತ್ತಾರೆ ನಂತರ ನೀವು ವಿಚಾರಸಾಗರ ಮಂಥನ ಮಾಡಬೇಕಾಗಿದೆ. ಇದು ಮೊದಲನೆ ನಂಬರ್ನ ತಪ್ಪಾಗಿದೆ. ನೀವು ತಿಳಿದಿರುವಿರಿ ಈಗ ಕಲಿಯುಗವಿದೆ. ಯಾದವರು, ಕೌರವರು, ಪಾಂಡವರು ಇದ್ದಾರೆ. ಕಲಿಯುಗದ ಸಮಯವೂ ಸಹಾ ಇದೆ. ಕಲಿಯುಗದ ನಂತರ ಖಂಡಿತ ಸತ್ಯಯುಗ ಆಗುವುದು. ತಂದೆ ಹೇಳುತ್ತಾರೆ-ನಾನು ಗೈಡ್ ಆಗಿ ಬಂದಿದ್ದೇನೆ, ರಾವಣನ ಮುಷ್ಠಿಯಿಂದ ಬಿಡಿಸಿಕೊಂಡು ವಾಪಸ್ಸು ಕರೆದುಕೊಂಡುಹೋಗಲು. ಆತ್ಮಗಳನ್ನೆ ಕರೆದುಕೊಂಡು ಹೋಗುವೆ.

ಆತ್ಮ-ಪರಮಾತ್ಮ ಬಹುಕಾಲದಿಂದ ಬೇರೆಯಿದ್ದರು..... ಎಂಬ ಗಾಯನವೂ ಸಹಾ ಇದೆ. ಹೀಗಲ್ಲಾ ಕೃಷ್ಣ ಬಹುಕಾಲ ಬೇರೆ ಇದ್ದರು ಎಂದು. ಮಹಿಮೆ ಸಹಾ ಆ ನಿರಾಕಾರನದೇ ಆಗಿದೆ-ಯಾವಾಗ ಸದ್ಗುರು ಸಿಕ್ಕಿದರು ದಳ್ಳಾಳಿಯ ರೂಪದಲ್ಲಿ ಮಿಲನ ಮಾಡಿ ಸುಂದರ ಮೇಳಾ ಮಾಡಿದರು....... ಸತ್ಯ ಪರಮಪಿತ ಪರಮಾತ್ಮ ದಳ್ಳಾಳಿಯ ರೂಪದಲ್ಲಿ ಸಿಗುತ್ತಾರೆ. ವ್ಯವಹಾರ ದಳ್ಳಾಳಿಯ ಮೂಲಕ ಆಗುವುದು. ಇಲ್ಲೂ ಸಹಾ ನಿಶ್ಚಿತಾರ್ಥ ಆಗುವುದು. ಆತ್ಮ ಮತ್ತು ಪರಮಾತ್ಮ ಬೇರೆ ಬೇರೆ ಇದ್ದಾರೆ. ಪರಮಾತ್ಮ ಆಗಿದ್ದಾರೆ ನಿರಾಕಾರ ಅವರು ಬಂದು ಇವರಲ್ಲಿ ಪ್ರವೇಶಮಾಡಿ ನಿಮ್ಮ ಜೊತೆ ನಿಶ್ಚಿತಾರ್ಥ ಮಾಡುತ್ತಾರೆ. ಖುದ್ದು ದಳ್ಳಾಳಿಯಾಗುತ್ತಾರೆ. ಹೇಳುತ್ತಾರೆ ಪರಮಪಿತ ಪರಮಾತ್ಮನಾದ ನನ್ನನ್ನು ನೆನಪುಮಾಡಿ ಎಂದು. ಈ ಶರೀರದಲ್ಲಿ ಕುಳಿತು ತಿಳಿಸುತ್ತಾರೆ ನನ್ನೊಬ್ಬನನ್ನೇ ನೆನಪು ಮಾಡಿ (ಮಾಮೇಕಮ್ ಯಾದ್ ಕರೋ). ನಾನು ನಿಮ್ಮನ್ನು ಮಾಯಾ ರಾವಣನಿಂದ ಮುಕ್ತಗೊಳಿಸಿ ಜೊತೆಯಲ್ಲಿ ಕರೆದೊಯ್ಯುತ್ತೇನೆ, ನಂತರ ನಿಮಗೆ ರಾಜ್ಯಭಾಗ್ಯ ಕೊಟ್ಟು ನಾನು ನಿರ್ವಾಣ ಧಾಮದಲ್ಲಿ ಕುಳಿತುಬಿಡುವೆನು. ಕೃಷ್ಣನು ಈ ರೀತಿ ಹೇಳಲು ಸಾಧ್ಯವಿಲ್ಲ. ಇವರಾಗಿದ್ದಾರೆ ಆತ್ಮ ಮತ್ತು ಪರಮಾತ್ಮ. ಕೃಷ್ಣನಂತು ಚಿಕ್ಕ ಮಗುವಾಗಿದ್ದಾನೆ. ತಿಳಿಸಿಕೊಡಲು ಮಾತುಗಳಂತೂ ಬಹಳ ಇದೆ. ಆದ್ದರಿಂದ ಬಾಬಾ ವಿವರಿಸಿದ್ದಾರೆ ಹೇಗೆ ಇವರಲ್ಲಿ ಪ್ರವೇಶತೆ ಆಯಿತು? ನಂತರ ತಿಳಿಯಲು ಪ್ರಾರಂಭವಾಯಿತು-ನಾನು ರಾಜರುಗಳಿಗೆ ರಾಜನಾಗುವೆ. ವಿಷ್ಣುವಿನ ಸಾಕ್ಷಾತ್ಕಾರವೂ ಸಹಾ ಆಯಿತು ಮತ್ತು ಮನಸ್ಸಿಗೆ ಬಹಳ ಖುಶಿಯೂ ಆಯಿತು. ನಂತರ ವಿನಾಶದ ಸಾಕ್ಷಾತ್ಕಾರವೂ ಸಹಾ ಆಯಿತು. ಆದರೂ ಇಷ್ಟು ತಿಳುವಳಿಕೆ ಬರಲಿಲ್ಲ. ಈಗ ತಿಳುವಳಿಕೆ ಬಂದಿದೆ ಬಾಬಾನೇ ಈ ಸಕ್ಷಾತ್ಕಾರ ಮಾಡಿಸಿದರು- ನೀನು ನರನಿಂದ ನಾರಾಯಣ ಆಗುವೆ. ಆದರೂ ಆ ಸಮಯದಲ್ಲಿ ಇಷ್ಟು ತಿಳುವಳಿಕೆ ಇರಲಿಲ್ಲ. ಹೇಗೆ ಬಾಬಾ ರಾತ್ರಿ ತಿಳಿಸುತ್ತಿದ್ದರು- ಹೇಗೊ ಏನಾಗುವುದೋ ಗೊತ್ತಿಲ್ಲಾ ಶಿವಬಾಬಾರವರನ್ನು ನೆನಪು ಮಾಡುವುದನ್ನು ಮರೆತುಹೋಗುತ್ತೇನೆ. ಹೀಗಲ್ಲಾ ಬಾಬಾ ಯಾವಾಗ ಪ್ರವೇಶ ಮಾಡುತ್ತಾರೆ ಆಗ ತಿಳಿಯುತ್ತೇನೆ ಬಾಬಾ ಬಂದಿದ್ದಾರೆ, ನೆನಪು ಇರುವುದು, ಬಾಬಾ ಹೊರಟುಹೋದಾಗ ಮರೆತುಹೋಗುತ್ತೇನೆ. ಪಾಯಿಂಟ್ಸ್ ಹೇಳುವಾಗ ಫೇಲ್ ಆಗುವುದು- ಬೇಹದ್ದಿನ ತಂದೆ ಬಂದು ತಿಳಿಸುತ್ತಾರೆ. ಆದರೆ ನಾನು ಖುದ್ದು ಮರೆತುಹೋಗುತ್ತೇನೆ. ನನ್ನ ನೆನಪಿನಿಂದಲೇ ಬಾಬಾ ಬರುವರೇ? ಈ ರೀತಿ ಹೇಳಿದರೆ ನಾನು ಘಳಿಗೆ-ಘಳಿಗೆ ನೆನಪು ಮಾಡುತ್ತೇನೆ. ಹಾಗೆ ಬಂದರೆ ಇದರಲ್ಲಿ ಎಲ್ಲರ ಕಲ್ಯಾಣವಿದೆ. ನೆನಪೆ ಮುಖ್ಯವಾಗಿಬಿಡುವುದು. ಬರಲಿ, ಬರದೇ ಇರಲಿ, ಬಾಬಾರವರನ್ನು ಖಂಡಿತ ನೆನಪು ಮಾಡಬೇಕು. ಬಾಬಾ ತಿಳಿಸುತ್ತಾರೆ ಗೀತಾ ಜಯಂತಿ ನಂತರ ಆಗುವುದು ಕೃಷ್ಣ ಜಯಂತಿ. ಮೊದಲು ಶಿವಜಯಂತಿ ನಂತರ ಗೀತಾಜಯಂತಿ ನಂತರ ಕೃಷ್ಣ ಜಯಂತಿ. ಶಿವ ಅಂತು ದೊಡ್ಡವರಾಗಿದ್ದಾರೆ. ತಟ್ಟನೆ ಬಂದರು ಮತ್ತು ಗೀತೆ ನುಡಿಸಿದರು. ಚಿಕ್ಕದಂತೂ ಅಲ್ಲ. ಈ ಮಾತುಗಳ ಮೇಲೆ ವಿಚಾರಸಾಗರ ಮಂಥನ ಮಾಡುವ ಅವಶ್ಯಕತೆ ಇದೆ-ನಾವು ಹೇಗೆ ತಿಳಿಸಿ ಹೇಳುವುದು? ಎಂದು.

ಮೊದಲು ಯೋಚನೆ ಮಾಡಿ- ಶಿವ ಎಂದು ಯಾರಿಗೆ ಹೇಳಲಾಗುವುದು, ಯಾರ ರಾತ್ರಿ ಆಚರಿಸಲಾಗುವುದು. ಸತ್ಯಯುಗವಾಗಿದೆ

ಶ್ರೀ ಕೃಷ್ಣನ ರಾಜಧಾನಿ. ನರನಿಂದ ನಾರಾಯಣ ಆಗುವಂತಹ ಜ್ಞಾನವನ್ನು ಖಂಡಿತವಾಗಿ ತಂದೆಯೇ ಕೊಡುತ್ತಾರೆ, ಅವರು ಜ್ಞಾನಸಾಗರ ಆಗಿದ್ದಾರೆ. ಬೇರೆ ಯಾರನ್ನೂ ಜ್ಞಾನಸಾಗರ ಎಂದು ಕರೆಯಲಾಗು ವುದಿಲ್ಲ. ಭಗವಂತ ಜ್ಞಾನಸಂಪನ್ನ, ರಚೈತ, ಬೀಜರೂಪವಾಗಿದ್ದಾರೆ. ಅವರೆ ಡ್ರಾಮದ ಜ್ಞಾನವನ್ನು ಹೇಳುತ್ತಾರೆ. ಡ್ರಾಮ ಯಾವಾಗ ಪ್ರಾರಂಭವಾಗುವುದು ಮತ್ತು ನಂತರ ಯಾವಾಗ ಪೂರ್ಣವಾಗುವುದು ಎಂದು ಯಾರಿಗೂ ತಿಳಿದಿಲ್ಲ. ಸತ್ಯಯುಗದಿಂದ ಕಲಿಯುಗದ ಅಂತ್ಯದವರೆಗೆ ಪ್ರಪಂಚದ ಚರಿತ್ರೆ-ಭೂಗೋಳ ಹೇಗೆ ಪುನರಾವರ್ತನೆ ಯಾಗುವುದು-ಇದನ್ನು ಯಾರೂ ತಿಳಿಸಿಹೇಳುವವರಿಲ್ಲ. ತಿಳಿಸಿದರೆಂದರೆ ಅವರು ಯಾರೋ ತ್ರಿಕಾಲದರ್ಶಿಗಳು ಆಗಿರಬೇಕು. ತ್ರಿಕಾಲದರ್ಶಿಗಳಂತೂ ಒಬ್ಬರನ್ನು ಬಿಟ್ಟರೆ ಬೇರೆ ಯಾರೂ ಇಲ್ಲ. ಅವರೇ ನಿಮ್ಮನ್ನು ತ್ರಿಕಾಲದರ್ಶಿಗಳನ್ನಾಗಿ ಮಾಡುತ್ತಾರೆ. ಒಳ್ಳೆಯದು !

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1) ಮಾಸ್ಟರ್ ಜ್ಞಾನಪೂರ್ಣ ಮತ್ತು ತ್ರಿಕಾಲದರ್ಶಿಯಾಗಿ ಶ್ರೀಕೃಷ್ಣ ಮತ್ತು ಪರಮಾತ್ಮ ಶಿವನ ಮಹಾನ್ ಅಂತರವನ್ನು ಸ್ಪಷ್ಟ ಮಾಡಿ ಘೋರ ಅಂಧಕಾರವನ್ನು ದೂರ ಮಾಡುವ ಸೇವೆ ಮಾಡಬೇಕು.

2) ಬಾಬಾ ಏನು ಪ್ರಬಂಧ ಕೊಡುತ್ತಾರೆ ಅದರ ಮೇಲೆ ವಿಚಾರಸಾಗರ ಮಂಥನ ಮಾಡಬೇಕು- ಹೇಗೆ ಬೇರೆಯವರಿಗೆ ತಿಳಿಸಿ ಹೇಳುವುದು.

ವರದಾನ: ಬುದ್ಧಿಯ ಚಮತ್ಕಾರದ ಮುಖಾಂತರ ಆಕಾರನಲ್ಲಿ ಸಾಕಾರದ ಅನುಭವ ಮಾಡುವಂತಹ ದಿಲಾರಾಮ ದಿಲ್ರುಬಾ ಭವ.

ಎಷ್ಟೋ ಮಕ್ಕಳು ಭಲೇ ಹಿಂದೆ ಬಂದಿರಬಹುದು, ಆದರೆ ಆಕಾರ ರೂಪದ ಮೂಲಕವೂ ಸಹ ಸಾಕಾರ ರೂಪದ ಅನುಭವ ಮಾಡಿಸುವರು. ಈ ರೀತಿ ಅನುಭವದಿಂದ ಹೇಳುತ್ತಾರೆ ನಾವು ಸಾಕಾರದಲ್ಲಿ ಪಾಲನೆ ಪಡೆದಿರುವೆವು ಮತ್ತು ಈಗೂ ಸಹ ಪಡೆಯುತ್ತಿರುವೆವು. ಆದ್ದರಿಂದ ಆಕಾರ ರೂಪದಿಂದ ಸಾಕಾರ ರೂಪದ ಅನುಭವ ಮಾಡುವುದು ಇದು ಬುದ್ಧಿಯ ಲಗನ್ನಿಂದ, ಸ್ನೇಹದ ಪ್ರತ್ಯಕ್ಷ ಸ್ವರೂಪವಾಗಿದೆ. ಇದೂ ಸಹ ಬುದ್ಧಿಯ ಚಮತ್ಕಾರದ ಪುರಾವೆಯಾಗಿದೆ. ಇಂತಹ ಮಕ್ಕಳೇ ದಿಲಾರಾಮ ತಂದೆಯ ಸಮೀಪ ದಿಲಾರಾಮನ ದಿಲ್ರುಬಾ ಆಗಿದ್ದಾರೆ. ಯಾರ ಹೃದಯದಲ್ಲಿ ಸದಾ ಇದೇ ಗೀತೆ ನುಡಿಯುತ್ತಿರಲಿ - ವ್ಹಾ ಮೇರಾ ಬಾಬಾ ವ್ಹಾ.

ಸ್ಲೋಗನ್: ತ್ಯಾಗೀ ಆತ್ಮನ ಪ್ರತಿ ಕರ್ಮ ಅಥವಾ ಹೆಜ್ಜೆಯಲ್ಲಿ ಸಫಲತೆ ಸಮಾವೇಶವಾಗಿದೆ.